ಇ) ಮೇಲೆ ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಕಾಮಗಾರಿಗಳಿಗೆ ಮಲೆನಾಡು ಪ್ರದೇಶಾಭಿವೃದ್ದಿ ಮಂಡಳಿಯು ಇನ್ನೂ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.

ಉ) ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಗ್ರಾಮ ಸಹಾಯಕರನ್ನು ಖಾಯಂಗೊಳಿಸುವ ಕುರಿತು

1915 (2510) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಗ್ರಾಮ ಸೇವಕರು (ಗ್ರಾಮ ಸಹಾಯಕ) ಸೇವೆ ಸಲ್ಲಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

ಆ) ಇವರುಗಳೆಲ್ಲಾ ಯಾವಾಗಿನಿಂದ ಸೇವೆ ಸಲ್ಲಿಸುತ್ತಿದ್ದಾರೆ;

ಇ) ಇವರುಗಳನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಖಾಯಂಗೊಳಿಸಲಾಗುವುದು;

ಉ) ಎಷ್ಟು ಜನರನ್ನು ಖಾಯಂಗೊಳಿಸಲಾಗುವುದು; ಎಷ್ಟು ಹಂತಗಳಲ್ಲಿ ಖಾಯಂಗೊಳಿಸಲಾಗುವುದು (ವಿವರ ನೀಡುವುದು)?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 9665 ಗ್ರಾಮ ಸಹಾಯಕರುಗಳು ಸೇವೆ ಸಲ್ಲಿಸುತ್ತಿದ್ದಾರೆ.

ಜಿಲ್ಲಾವಾರು ಮಾಹಿತಿ ಅನುಬಂಧ -1 ರಲ್ಲಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಕಂಇ 3 ಎಂವಿಎಸ್ 77, ದಿನಾಂಕ : 16-9-1978 ಮತ್ತು ಆದೇಶ ಸಂಖ್ಯೆ ಕಂಇ 82 ಎಂವಿಎಸ್ (1) 82, ದಿನಾಂಕ: 23-9-1982ರಲ್ಲಿ ಒಟ್ಟು 10450 ಗ್ರಾಮ ಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದ್ದು, ಆ ನಂತರದಿಂದ ಆ ಹುದ್ದೆಗಳಲ್ಲಿ ಗ್ರಾಮ ಸಹಾಯಕರುಗಳು ಸೇವೆ ಸಲ್ಲಿಸುತ್ತಿದ್ದಾರೆ.

ಇ) ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ

ಈ) - ″-

ಉ) - ″-

ಅನುಬಂಧ -1

ಬೆಂಗಳೂರು ವಿಭಾಗ:

ಬೆಂಗಳೂರು ನಗರ	-	192
ಬೆಂಗಳೂರು ಗ್ರಾಮಾಂತರ	-	424
ಶಿವಮೊಗ್ಗ	-	170

ದಾವಣಗೆರೆ	-	275
ಚಿತ್ರದುರ್ಗ	-	324
ಕೋಲಾರ	-	540
ತುಮಕೂರು	-	648
		2573

ಮೈಸೂರು ವಿಭಾಗ:

ಮೈಸೂರು	-	464
ಚಾಮರಾಜನಗರ	-	239
ಮಂಡ್ಯ	-	497
ಚಿಕ್ಕಮಗಳೂರು	-	197
ಕೊಡಗು	-	139
ಮಂಗಳೂರು	-	318
ಉಡುಪಿ	-	238
ಹಾಸನ	-	430
		2522

ಬೆಳಗಾವಿ ವಿಭಾಗ:

ಬೆಳಗಾವಿ	-	738
ವಿಜಾಪುರ	-	342
ಬಾಗಲಕೋಟೆ	-	357
ಧಾರವಾಡ	-	221
ಗದಗ	-	196
ಹಾವೇರಿ	-	368
ಉತ್ತರ ಕನ್ನಡ (ಕಾರವಾರ)	-	397
		2619

ಗುಲ್ಬರ್ಗ ವಿಭಾಗ:

ಗುಲ್ಬರ್ಗ	-	650
ಬೀದರ್	-	350
ರಾಯಚೂರು	-	333
ಕೊಪ್ಪಳ	-	216
ಬಳ್ಳಾರಿ	-	402
		1951